ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 378/2018

ಪಿ. ಡಬ್ಲ್ಯುಃ 02
ಸಿ. ಡಬ್ಲ್ಯುಃ 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಮಶೆಟ್ಟಿ |
| ತಂದೆ/ಪತಿಯ ಹೆಸರು | ಃ | ಸುಬ್ಬಶೆಟ್ಟಿ |
| ವಯಸ್ಸು | ಃ | 48 ವರ್ಷ |
| ವೃತ್ತಿ | ಃ | ಫ್ಯಾಕ್ಟರಿ ಕೆಲಸ |
| ವಾಸ | ಃ | ಮೊಗರಹಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ
07.06.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಪಿರ್ಯಾದಿ ಗೊತ್ತು. ಅವರು ನಮ್ಮ ಮನೆ ಪಕ್ಕದವರು. ಆರೋಪಿ ಗೊತ್ತು. ಅವರು ನಮ್ಮ ಎದುರುಗಡೆ ಮನೆಯಲ್ಲಿ ವಾಸವಿದ್ದರು.

ಸುಮಾರು ಎರಡೂವರೆ ವರ್ಷಗಳ ಹಿಂದೆ ಸಂಜೆ 07.00-07.30 ಸಮಯದಲ್ಲಿ ಆರೋಪಿ ತನ್ನ ಮನೆಯ ನಾಯಿ ಹಿಡಿದುಕೊಂಡು ಗಲೀಜು ಮಾಡಿಸುತ್ತಿದ್ದಾಗ ಮಹದೇವ ರವರು ಏಕೆ ಮನೆಯ ಬಳಿ ಗಲೀಜು ಮಾಡಿಸುತ್ತೀಯಾ ಎಂದು ಕೇಳಿದ್ದಕ್ಕೆ ಅವರಿಬ್ಬರ ನಡುವೆ ಗಲಾಟೆಯಾದ ವಿಚಾರ ಮರುದಿನ ಪೋಲೀಸರು ಬಂದು ವಿಚಾರಣೆ ಮಾಡಿದಾಗ ನನಗೆ ಗೊತ್ತಾಯಿತು.

ನನ್ನ ಸಮಕ್ಷಮ ಆರೋಪಿ ಮತ್ತು ಮಾದೇಗೌಡರ ನಡುವೆ ಯಾವುದೇ ಗಲಾಟೆಯಾಗಿಲ್ಲ. ನನ್ನ ಸಮಕ್ಷಮ ಆರೋಪಿ ಕಲ್ಲಿನಿಂದ ಮಾದೇಗೌಡರಿಗೆ ಹೊಡೆದು ಹಲ್ಲೆ ಮಾಡಿಲ್ಲ. ನಾನು ಆರೋಪಿ ಮತ್ತು ಮಾದೇಗೌಡರ ಮಧ್ಯೆ ಆದ ಜಗಳವನ್ನು ನೋಡಿಲ್ಲ. ನ್ಯಾಯಾಲಯದ ಮುಂದಿರುವ ಕಲ್ಲನ್ನು ನಾನು ಈ ಮೊದಲು ನೋಡಿಲ್ಲ. ಪೋಲೀಸರಿಗೆ ನಾನು ಗಲಾಟೆ ಸಂಬಂಧ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ 12.04.2018 ರಂದು ರಾತ್ರಿ ಸುಮಾರು 09.00 ಗಂಟೆಯಲ್ಲಿ ನಾನು ಮತ್ತು ನಮ್ಮ ಮನೆಯ ಪಕ್ಕದ ಸಿರಾಜ್ ಇಬ್ಬರು ಅಂಗಡಿಕಡೆಗೆ ಹೋಗಿ ವಾಪಸ್ಸು ಮನೆಯ ಕಡೆಗೆ ಹೋಗುತ್ತಿದ್ದಾಗ ಮಾದೇಗೌಡರ ಮನೆ ಬಳಿ ಆರೋಪಿ ತನ್ನ ಮನೆಯ ನಾಯಿಯನ್ನು ಹಿಡಿದುಕೊಂಡು ಗಲೀಜು ಮಾಡಿಸುತ್ತಿದ್ದರು, ಅದನ್ನು ಪಿರ್ಯಾದಿ ಪ್ರಶ್ನಿಸಿದ್ದು ಅದಕ್ಕೆ ಏಕಾಏಕಿ ಆರೋಪಿ ಅಲ್ಲೇ ಬಿದಿದ್ದ ಕಲ್ಲನ್ನು ಎತ್ತಿಕೊಂಡು ಪಿರ್ಯಾದಿಯ ತುಟಿಗೆ ಮತ್ತು ಎಡಭಾಗದ ಹಣೆಗೆ ಹೊಡೆದು ರಕ್ತಗಾಯ ಪಡಿಸಿದರು, ಅದರಿಂದ ಪಿರ್ಯಾದಿಯ ಮೇಲ್ಭಾಗದ ಹಲ್ಲು ಮುರಿಯಿತು, ಆಗ ನಾನು ಮತ್ತು ಸಿರಾಜ್ ಇಬ್ಬರು ಹೋಗಿ ಆರೋಪಿ ಕೈಯಿಂದ ಕಲ್ಲನ್ನು ಕಿತ್ತು ಬಿಸಾಡಿ ಜಗಳ ಬಿಡಿಸಿದ್ದೇವು ಹಾಗೂ ಆರೋಪಿ ಮತ್ತು ಪಿರ್ಯಾದಿಗೆ ಹೊಡೆದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆಂದು ಈಗ ಓದಿ ಹೇಳಿದಂತೆ ಪೋಲೀಸರಿಗೆ ಹೇಳಿಕೆಯನ್ನು ಗಲಾಟೆ ಸಂಬಂಧ ನೀಡಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

ಆರೋಪಿ ನಮ್ಮ ಮನೆಯ ಎದುರುಗಡೆಯವನಾದ್ದರಿಂದ ಸಾಕ್ಷಿ ಹೇಳಿದರೆ ಅವನಿಗೆ ತೊಂದರೆಯಾಗುತ್ತದೆ ಎಂದು ತಿಳಿದು ನನ್ನ ಸಮಕ್ಷಮ ಆರೋಪಿ ಪಿರ್ಯಾದಿ ಮೇಲೆ ಹಲ್ಲೆ ಮಾಡಿದ್ದು ಅದನ್ನು ನೋಡಿ ನಾನು ಬಿಡಿಸಿದ್ದರು ಸಹಿತ ಯಾವುದೇ ಗಲಾಟೆ ನನ್ನ ಸಮಕ್ಷಮ ನಡೆದಿಲ್ಲವೆಂದು ಹಾಗೂ ಪೋಲೀಸರಿಗೆ ಹೇಳಿಕೆಯನ್ನು ಗಲಾಟೆ ಸಂಬಂಧ ನೀಡಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಮೂಲತಃ ಬೆಂಗಳೂರಿನವರು ಎಂದರೆ ಸರಿ. ಪಿರ್ಯಾದಿ ಹಾಗೂ ನಾನು ವಿಶ್ವಾಸದಲ್ಲಿದ್ದೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.